
ಪ್ರಜಾವಾಣಿ – 09.10.2015






ವಿಜಯಪುರ ನಗರದ ಬಿಎಲ್‌ಡಿಇ ಸಂಸ್ಥೆಯ ಎಸ್‌ಬಿ ಕಲಾ ಮತ್ತು ಕೆಸಿಪಿ ವಿಜ್ಞಾನ ಮಹಾ ವಿದ್ಯಾಲಯದಲ್ಲಿ ನಡೆದ ಸಂವಾದದಲ್ಲಿ ಸಮಾಜ ಕಲ್ಯಾಣಾಧಿಕಾರಿ ರಾಮನಗೌಡ ಕನ್ನೊಳ್ಳಿ ಮಾತನಾಡಿದರು

# ‘ಸೌಲಭ್ಯ ಬಳಸಿಕೊಂಡು ಸಬಲರಾಗಿ’

ಪ್ರಜಾವಾಣಿ ವಾರ್ತೆ

ವಿಜಯಪುರ: ಸರ್ಕಾರದ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಂಡು ಜೀವನದಲ್ಲಿ ಸಬಲರಾಗಬೇಕು ಎಂದು ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ ರಾಮನಗೌಡ ಕನ್ನೊಳ್ಳಿ ಹೇಳಿದರು.

ನಗರದ ಬಿಎಲ್‌ಡಿಇ ಸಂಸ್ಥೆಯ ಎಸ್‌ಬಿ ಕಲಾ ಮತ್ತು ಕೆಸಿಪಿ ವಿಜ್ಞಾನ ಮಹಾ ವಿದ್ಯಾಲಯದಲ್ಲಿ ನಡೆದ ಸಂವಾದದಲ್ಲಿ ಮಾತನಾಡಿದ ಅವರು, ಹಿಂದುಳಿದ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಸ್ವಾವಲಂಬನೆಗಾಗಿ ಸಮಾಜ ಕಲ್ಯಾಣ ಇಲಾಖೆ ಶಿಷ್ಯವೇತನದಂಥ ಹಲ ಯೋಜನೆಗಳನ್ನು ಜಾರಿಗೊಳಿಸಿದೆ ಎಂದರು.

ಇಲಾಖೆಯಿಂದ ಸ್ಪರ್ಧಾತ್ಮಕ ಪರೀಕ್ಷೆಗಳ ಬಗ್ಗೆ ಉಚಿತ ತರಬೇತಿ ನೀಡಲಾಗುತ್ತಿದೆ. ಸಮುದಾಯದಿಂದ ಹಿಂದುಳಿದರು ಕೀಳರಿಮೆ ತಾಳಬಾರದು. ಯಾರು ಸೌಲಭ್ಯದಿಂದ ವಂಚಿತರಾಗಿದ್ದಾರೆ ಅವರೆಲ್ಲರೂ ಒಂದು ರೀತಿ ಹಿಂದುಳಿದವರೇ ಎಂದು ಹೇಳಿದರು.

ಪ್ರತಿಯೊಬ್ಬರು ಭಾಷಾ ಪ್ರಭುತ್ವ ಹೊಂದಬೇಕು. ಭಾಷೆಯಿಂದ ನಮ್ಮ ಸಂಸ್ಕೃತಿ, ಹಿರಿಮೆ ಪ್ರತಿಬಿಂಬಿತ ಆಗುತ್ತದೆ. ವಿದ್ಯಾರ್ಥಿಗಳು ಸೊಗಸಾಗಿ ಆಂಗ್ಲಬಾಷೆಯಲ್ಲಿ ಮಾತನಾಡುವುದನ್ನು ಕಲಿಯಬೇಕಿದೆ ಎಂದು ಕಿವಿಮಾತು ಹೇಳಿದರು.

ಶ್ರದ್ಧೆ, ದುಡಿಮೆ, ಸಾಮಾಜಿಕ ಕಲ್ಪನೆ ಮೈಗೂಡಿಸಿಕೊಂಡು ಜೀವನದಲ್ಲಿ ಮುನ್ನಡೆಯಬೇಕು ಎಂದು ಹೇಳಿದ ರಾಮನಗೌಡ, ಉನ್ನತ ಸಾಧನೆ ತೋರಿದ ಮಹನೀಯರ ಆದರ್ಶಗಳನ್ನು ಮೈಗೂಡಿಸಿಕೊಳ್ಳಬೇಕು ಎಂದು ಇದೇ ಸಂದರ್ಭ ವಿದ್ಯಾರ್ಥಿಗಳಿಗೆ ತಿಳಿಸಿದರು.

ಪ್ರಾಚಾರ್ಯ ಪ್ರೊ.ಕೆ.ಜಿ.ಪೂಜಾರಿ ಅಧ್ಯಕ್ಷತೆ ವಹಿಸಿದ್ದರು. ನ್ಯಾಕ್ ಸಂಯೋಜಕ ಡಾ.ಆರ್.ಎಚ್.ಬಿದರಿ, ಪ್ರಾಣಿಶಾಸ್ತ್ರ ಪ್ರಾಧ್ಯಾಪಕ ಪ್ರೊ.ಎಂ.ಬಿ.ಮೂಲಿಮನಿ, ಭೌತಶಾಸ್ತ್ರ ಪ್ರಾಧ್ಯಾಪಕ ಪ್ರೊ.ಎಂ.ಎಸ್. ಯಾದಗಿರ, ಹಿಂದಿ ಪ್ರಾಧ್ಯಾಪಕ ಪ್ರೊ.ಎಸ್.ಟಿ.ಮೆಹರವಾಡೆ, ಎಸ್.ಬಿ. ದುಲಂಗೆ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಪ್ರೊ.ಎಸ್.ಬಿ. ಪಟ್ಟದಕಲ್ಲು ಸ್ವಾಗತಿಸಿದರು. ಎಂ.ಜಿ. ಯಂಕಂಚಿ ವಂದಿಸಿದರು.

Scanned with CamScanner

07.10.2015

ವಿಜಯಪುರ ಲೋಕಲ್ ಎಕ್ಸ್‌ಪ್ರೆಸ್

■ ಸಂವಾದ ಕಾರ್ಯಕ್ರಮ ■ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಕನ್ನೊಳ್ಳಿ ಸಲಹೆ

# ದೇಶದ ಹಿರಿಮೆ ಪ್ರತಿಬಿಂಬಕ್ಕೆ ಭಾಷೆ ಅಗತ್ಯ

**ವಿಜಯಪುರ:** ಹಿಂದುಳಿದ ವಿದ್ಯಾರ್ಥಿಗಳ ಅಭ್ಯಾಸಕ್ಕಾಗಿ ಉಪಯುಕ್ತ ಪುಸ್ತಕಗಳನ್ನು ವಿತರಿಸಲು ಯೋಜನೆ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ರಾಮನಗೌಡ ಕನ್ನೊಳ್ಳಿ ತಿಳಿಸಿದರು.

ಬಿಎಲ್‌ಡಿಇ ಸಂಸ್ಥೆಯ ಎಸ್‌ಬಿ ಕಲಾ ಹಾಗೂ ಕೆಸಿಪಿ ವಿಜ್ಞಾನ ಮಹಾವಿದ್ಯಾಲಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿ ಅವರು ಮಾತನಾಡಿದರು.

ವಿವಿಧ ಸ್ಪರ್ಧಾತ್ಮಕ ಪರೀಕ್ಷೆ ಎದುರಿಸಲು ಹಿಂದುಳಿದ ವಿದ್ಯಾರ್ಥಿಗಳಿಗೆ ನೆರವಾಗಲೆಂದು ಪುಸ್ತಕಗಳನ್ನು ವಿತರಿಸಲಾಗುತ್ತಿದೆ. ಅಲ್ಲದೇ, ಸರ್ಕಾರ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗಾಗಿ ಅನೇಕ ಯೋಜನೆ ಜಾರಿಗೊಳಿಸಿದ್ದು, ವಿದ್ಯಾರ್ಥಿಗಳು ಅವುಗಳ ಸದುಪಯೋಗಪಡೆದುಕೊಳ್ಳಬೇಕೆಂದರು.



ವಿಜಯಪುರದ ಬಿಎಲ್‌ಡಿಇ ಸಂಸ್ಥೆಯ ಎಸ್‌ಬಿ ಕಲಾ ಹಾಗೂ ಕೆಸಿಪಿ ವಿಜ್ಞಾನ ಮಹಾವಿದ್ಯಾಲಯದಲ್ಲಿ ಆಯೋಜಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ ರಾಮನಗೌಡ ಕನ್ನೊಳ್ಳಿ ಮಾತನಾಡಿದರು.

ಸಮುದಾಯದಿಂದ ಹಿಂದುಳಿದರು ಕೀಳಿರಮೆ ತಾಳಬಾರದು. ಯಾರು ಸೌಲಭ್ಯದಿಂದ ವಂಚಿತರಾಗಿದ್ದಾರೆ ಅವರೆಲ್ಲರೂ ಹಿಂದುಳಿದವರೆ. ಅಂಥವರು ಮಧುರವಾದ ಭಾಷಾ ಪ್ರಭುತ್ವ ಹೊಂದಬೇಕಾಗುತ್ತದೆ. ಭಾಷೆಯಿಂದ ನಮ್ಮ ಸಂಸ್ಕೃತಿ, ಹಿರಿಮೆ ಪ್ರತಿಬಿಂಬಿತವಾಗುತ್ತದೆ. ಅದಕ್ಕೆ ವಿದ್ಯಾರ್ಥಿಗಳು ಸೊಗಸಾಗಿ ಆಂಗ್ಲ ಭಾಷೆಯಲ್ಲಿ ಮಾತನಾಡುವುದನ್ನು ಕಲಿಯಬೇಕಿದೆ ಎಂದರು.

ಜ್ಞಾನಪೀಠ ಪ್ರಶಸ್ತಿ ಪಡೆದರೂ ಕೂಡ ಶಿವರಾಮ ಕಾರಂತ ಅಷ್ಟೊಂದು ಪ್ರಭಾವಿ ಪಂಡಿತರಾಗಿರಲಿಲ್ಲ. ಅವರ ಶ್ರದ್ಧೆ, ದುಡಿಮೆ ಮತ್ತು ಸಾಮಾಜಿಕ ಕಲ್ಪನೆ ಇವು ಅವರನ್ನು ಮೇರು ಪರ್ವತಕ್ಕೊಯ್ದವು ಎಂದರು.

ಪ್ರಾಚಾರ್ಯ ಕೆ.ಜಿ.ಪೂಜಾರಿ ಅಧ್ಯಕ್ಷತೆ ವಹಿಸಿದ್ದರು. ನ್ಯಾಕ್ ಸಂಯೋಜಕ ಡಾ.ಆರ್.ಎಚ್. ಬಿದರಿ, ಪ್ರಾಣಿಶಾಸ್ತ್ರ ಪ್ರಾಧ್ಯಾಪಕ ಎಂ.ಬಿ.ಮೂಲಿಮನಿ, ಎಂ.ಎಸ್. ಯಾದಗಿರ, ಎಸ್.ಟಿ.ಮೇರವಾಡೆ ಮತ್ತಿತರರು ಇದ್ದರು. ಎಸ್.ಬಿ. ಪಟ್ಟದಕಲ್ಲು ಸ್ವಾಗತಿಸಿದರು. ಎಂ.ಜಿ.ಯಂಕಚಿ ವಂದಿಸಿದರು.

# ಉದ್ಯೋಗಕ್ಕೆ ಭಾಷೆ ಅವಶ್ಯ




ವಿಜಯಪುರದ ಬಿಎಲ್‌ಡಿಇ ಸಂಸ್ಥೆಯ ಎಸ್‌ಬಿ ಕಲಾ ಹಾಗೂ ಕೆಸಿಪಿ ವಿಜ್ಞಾನ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ 'ವೃತ್ತಿಗಾಗಿ ಸೂಕ್ಷ್ಮ ಕೌಶಲ್ಯಗಳ ಅಭಿವೃದ್ಧಿ' ಉಪನ್ಯಾಸ ಕಾರ್ಯಕ್ರಮದಲ್ಲಿ ಸೆಂಟ್ರಲ್ ಸಿವಿಲ್ ಸೊಸೈಟಿ ಸಂಸ್ಥಾಪಕ ಸದಸ್ಯ ಆರ್.ಎಸ್. ತಿಕೋಟ ಮಾತನಾಡಿದರು.

ವಿಜಯಪುರ: ಬಹುರಾಷ್ಟ್ರೀಯ ಕಂಪನಿಗಳಲ್ಲಿ ಉದ್ಯೋಗಾವಕಾಶ ಗಿಟ್ಟಿಸಲು ಭಾಷಾ ಪ್ರಭುತ್ವ ಹೊಂದಿರುವುದು ಅಗತ್ಯವಾಗಿದೆ ಎಂದು ಸೆಂಟ್ರಲ್ ಸಿವಿಲ್ ಸೊಸೈಟಿ ಸಂಸ್ಥಾಪಕ ಸದಸ್ಯ ಆರ್.ಎಸ್. ತಿಕೋಟ ಹೇಳಿದರು.

ಹಳೆಯ ವಿದ್ಯಾರ್ಥಿಗಳ ಸಂಘ, ಪ್ಲೇಸ್‌ಮೆಂಟ್ ಘಟಕಗಳ ಸಹಯೋಗದಲ್ಲಿ ಬಿಎಲ್‌ಡಿಇ ಸಂಸ್ಥೆಯ ಎಸ್‌ಬಿ ಕಲಾ ಹಾಗೂ ಕೆಸಿಪಿ ವಿಜ್ಞಾನ ಕಾಲೇಜಿನಲ್ಲಿ ಈಚೆಗೆ ಹಮ್ಮಿಕೊಂಡಿದ್ದ 'ವೃತ್ತಿಗಾಗಿ ಸೂಕ್ಷ್ಮ ಕೌಶಲ್ಯಗಳ ಅಭಿವೃದ್ಧಿ' ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ವೃತ್ತಿ ತರಬೇತಿದಾರ, ಆಪ್ತ ಸಮಾಲೋಚಕ ಉಮೇಶ ಬೆಂಡಿಗೇರಿ ಮಾತನಾಡಿದರು. ಭಾರತೀಯ ಗ್ರಾಮೀಣಾಭಿವೃದ್ಧಿ ವೃತ್ತಿ ತರಬೇತಿ ಸರ್ಕಾರೇತರ ಸಂಸ್ಥೆ ಸಂಸ್ಥಾಪಕ ಬಿ.ಪಟವರಿ ಮಾತನಾಡಿದರು. ಐದನೇ ಸೆಮಿಸ್ಟರ್ ವಿದ್ಯಾರ್ಥಿಗಳು ಸಂವಾದದಲ್ಲಿ ಪಾಲ್ಗೊಂಡಿದ್ದರು. ಪ್ರಾಚಾರ್ಯ ಡಾ.ಎಸ್. ಜಿ. ಪೂಜಾರಿ ಅಧ್ಯಕ್ಷತೆ ವಹಿಸಿದ್ದರು. ಡಾ.ಆರ್.ಎಚ್. ಬಿದರಿ, ಉಪನ್ಯಾಸಕಿ ಶ್ರೇಯಾ ಜಾಧವ ಇದ್ದರು.

VK-28.10.2015



ವಿಜಯಪುರದ ಎಸ್‌ಬಿ ಕಲಾ ಹಾಗೂ ಕೆಸಿಪಿ ವಿಜ್ಞಾನ ಕಾಲೇಜ್‌ನಲ್ಲಿ ವಾಲ್ಮೀಕಿ ಜಯಂತಿ ಆಚರಣೆಯಲ್ಲಿ ಪ್ರಾಚಾರ್ಯ ಡಾ.ಕೆ.ಜಿ.ಪೂಜಾರಿ, ಎಸ್.ಟಿ.ಮೇರವಾಡೆ, ಪ್ರೊ.ಜಿ.ಆರ್.ಅಂಬಲಿ, ಡಾ.ವೈ.ಹಮ್ಮಗ್ಗಿ, ಪ್ರೊ.ಆರ್.ಎಸ್.ಬಿರಾದಾರ, ಡಾ.ಬಿ.ಎಂ.ಸಂಕನ್ನವರ, ಪ್ರೊ.ಎಂ.ಬಿ.ಮೂಲಿಮನಿ ಮತ್ತಿತರರಿದ್ದರು.

Scanned with CamScanner

ಂಗಳವಾರ, 28, ಜೂನ್, 2016, ಹುಬ್ಬಳ್ಳಿ ಸಂಯುಕ್ತ ಕರ್ನಾಟಕ

# ಆಧುನಿಕತೆ ಪ್ರಭಾವದಿಂದ ಸಂಸ್ಕೃತಿಗೆ ಧಕ್ಕೆ: ಗೋರುಚ

ವಿಜಯಪುರ

ಆಧುನೀಕರಣದ ಪ್ರಭಾವದಿಂದಾಗಿ ಭಾರತೀಯ ಸಂಸ್ಕೃತಿ ಮರೆಯಾಗುತ್ತಿದೆ ಎಂದು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಗೋ.ರು. ಚನ್ನಬಸಪ್ಪ ವಿಷಾದಿಸಿದರು.

ನಗರದ ಎಸ್.ಬಿ.ಕಲಾ ಹಾಗೂ ಕೆ.ಸಿ.ಪಿ ವಿಜ್ಞಾನ ಮಹಾವಿದ್ಯಾಲಯದಲ್ಲಿ ಹಮ್ಮಿಕೊಂಡ ಕ್ರೀಡಾ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಚಾಲನೆ ನೀಡಿ ಮಾತನಾಡಿದ ಅವರು, ಆಧುನಿಕತೆಯ ಅಬ್ಬರ ಹಾಗೂ ನಗರೀಕರಣದಿಂದಾಗಿ ಸಂಸ್ಕೃತಿ ಮರೆಯಾಗುತ್ತ ಸಾಗಿದೆ. ಅನೇಕರು ಆಧುನಿಕ ಜೀವನಶೈಲಿಗೆ ಮಾರು ಹೋಗಿ ನಮ್ಮ ಭವ್ಯ ಸಂಸ್ಕೃತಿಯನ್ನು ಕಡೆಗಣಿಸುತ್ತಿದ್ದಾರೆ. ಭಾರತೀಯ ಸಂಸ್ಕೃತಿಯ ಚಿಂತನೆ, ಆದರ್ಶಗಳನ್ನು ಮೈಗೂಡಿಸಿಕೊಂಡಾಗ ಮಾತ್ರ ಸಾಧನೆಯ ಶಿಖರ ತಲುಪಲು ಸಾಧ್ಯ ಎಂದರು.

ಭಾರತ ಸಂಸ್ಕೃತಿ ಹೃದಯ ಸಂಸ್ಕೃತಿಯಾಗಿದೆ. ಹೃದಯ ವೈಶಾಲ್ಯತೆ, ಮಾನವೀಯತೆಯ ಪ್ರತೀಕವಾಗಿದೆ. ವಿದ್ಯಾರ್ಥಿಗಳು ಸಾಂಸ್ಕೃತಿಕ ಅಭಿರುಚಿ ಬೆಳೆಸಿಕೊಳ್ಳಬೇಕು. ಉತ್ತಮ ಹವ್ಯಾಸಗಳಲ್ಲಿ ತೊಡಗಿಸಿಕೊಂಡು ಜೀವನದಲ್ಲಿ ಮುನ್ನಡೆಯಬೇಕು ಎಂದು ಕರೆ ನೀಡಿದರು.



ವಿಜಯಪುರದ ಎಸ್.ಬಿ. ಕಲಾ ಮತ್ತು ಕೆಸಿಪಿ ವಿಜ್ಞಾನ ಮಹಾವಿದ್ಯಾಲಯದಲ್ಲಿ ಕ್ರೀಡಾ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಿಗೆಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಗೋ.ರು.ಚನ್ನಬಸಪ್ಪ ಚಾಲನೆ ನೀಡಿದರು.

ಮುಖ್ಯ ಅತಿಥಿಯಾಗಿದ್ದ ಅಖಿಲ ಭಾರತೀಯ ಶರಣ ಸಾಹಿತ್ಯ ಪರಿಷತ್ ಉಪಾಧ್ಯಕ್ಷ ಡಾ.ಬಸವರಾಜ ಸಾದರ ಮಾತನಾಡಿ, ಭಾರತೀಯ ಸಂಸ್ಕೃತಿ ಅತ್ಯಂತ ಶ್ರೇಷ್ಠವಾದುದು. ಮಗುವನ್ನು ಪೋಷಿಸಿ ಸಂರಕ್ಷಿಸಿದಂತೆ ಇಂದು ಸಂಸ್ಕೃತಿಯನ್ನು ಕಾಪಾಡಿಕೊಳ್ಳಬೇಕಾಗಿದೆ. ಭಾರತೀಯ ಸಂಸ್ಕೃತಿ ರಕ್ಷಣೆಗೆ ಪ್ರತಿಯೊಬ್ಬರು ತೊಡಗಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಸಾನ್ನಿಧ್ಯ ವಹಿಸಿದ್ದ ಜ್ಞಾನಯೋಗಾಶ್ರಮದ ಶಾಂತಮಲ್ಲಿಕಾರ್ಜುನ ಸ್ವಾಮಿಗಳು ಆಶೀರ್ವಚನ ನೀಡಿ, ಇಂದು ಗ್ರಾಮೀಣ ಕ್ರೀಡೆಗಳು ಅವಸಾನದತ್ತ ಸಾಗುತ್ತಿವೆ. ಮಕ್ಕಳು ಆಟದ ಮೈದಾನಕ್ಕಿಂತ ಹೆಚ್ಚು ಗೂಗಲ್ ಸರ್ಚ್ ಎಂಜಿನ್‌ನಲ್ಲಿಯೇ ಕಾಲ ಕಳೆಯುತ್ತಿದ್ದಾರೆ. ಅಂತರ್ಜಾಲದೊಂದಿಗೆ ಬೆಸೆದುಕೊಂಡಿರುವ ಮಕ್ಕಳು ಆಟಗಳತ್ತ ಲಕ್ಷ್ಯ ವಹಿಸುತ್ತಿಲ್ಲ. ಕೇವಲ ಕಂಪ್ಯೂಟರ್ ಗೇಮ್‌ಗಳ ಗೀಳು ಅಂಟಿಸಿಕೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ಮಕ್ಕಳಲ್ಲಿ ಕ್ರೀಡೆಯ ಬಗ್ಗೆ ಜಾಗೃತಿ ಮೂಡಿಸಬೇಕಿದೆ. ಅವರನ್ನು ಆಟದ ಮೈದಾನದತ್ತ ಕರೆದುಕೊಂಡು ಹೋಗಬೇಕಿದೆ ಎಂದರು.

ಸಾಂಸ್ಕೃತಿಕ ವಿಭಾಗದ ಕಾರ್ಯಾಧ್ಯಕ್ಷ ಎಸ್.ಟಿ. ಮೇರವಾಡೆ ಅವರು ಅನುವಾದಿಸಿದ 'ಮೈಲುಗಲ್ಲುಗಳು' ಸಣ್ಣ ಕತೆಗಳ ಪುಸ್ತಕ ಬಿಡುಗಡೆಗೊಳಿಸಲಾಯಿತು. ಬಿ.ಎಲ್.ಡಿ.ಇ. ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಡಾ.ಬಿ.ಜಿ.ಮೂಲಿಮನಿ ಅಧ್ಯಕ್ಷತೆ ವಹಿಸಿದ್ದರು.

ಪ್ರಾಚಾರ್ಯ ಡಾ.ಕೆ.ಜಿ.ಪೂಜಾರಿ ಸ್ವಾಗತಿಸಿದರು. ಕ್ರೀಡಾ ವಿಭಾಗದ ನಿರ್ದೇಶಕ ಎಸ್.ಬಿ.ಪಾಟೀಲ್ ಮೊದಲಾದವರು ಉಪಸ್ಥಿತರಿದ್ದರು.

Scanned with CamScanner